

# ಶ್ರೀ ವೈಭವ ಲಕ್ಷ್ಮೀ ರಂಗೋಲಿ



ಈ ರಂಗೋಲಿಯನ್ನು ಲಕ್ಷ್ಮೀ ಚಿತ್ರಪಟದ ಮುಂದೆ ಸುಣ್ಣದಿಂದ ಬರೆದು ಮಧ್ಯೆ ಕುಂಕುಮದ ಬೊಟ್ಟನ್ನು ಇಟ್ಟು ಅರಿಸಿನದಿಂದ ಸುತ್ತಲೂ ರಂಗೋಲಿ ಹಾಕಿದರೆ ತುಂಬಾ ಉತ್ತಮ ಫಲ ದೊರೆಯುತ್ತದೆ.

# ಪ್ರಸನ್ನ ವೈಭವ ಲಕ್ಷ್ಮಿ



ಶ್ರೀ

# ಪ್ರಸನ್ನ ವೈಭವ ಲಕ್ಷ್ಮೀ ವ್ರತ

## ಹಾಗೂ ಪೂಜಾ ವಿಧಾನ

(ಪೂಜಾ ವಿಧಾನ, ನಿಯಮ, ಕ್ರಮ ಹಾಗೂ ಮಹಿಮೆಗಳನ್ನೊಳಗೊಂಡಿದೆ)

http://poojavidhana.blogspot.com/



ಪ್ರಕಾಶಕರು : ಫೋನ್ : 2262303

ಶ್ರೀ ಸರಸ್ವತೀ ರತ್ನಾಕರ ಬುಕ್ ಡಿಪೋ

618, ರಾಜೇಶ್ವರಿ ಮಾರ್ಕೆಟ್, ಅವೆನ್ಯೂ ರಸ್ತೆ, ಬೆಂಗಳೂರು-560 002



## ಶ್ರೀ ಪ್ರಸನ್ನ ವೈಭವಲಕ್ಷ್ಮೀ ಪೂಜಾವಿಧಾನ

ಜಗನ್ಮಾತೆಯೂ, ಮೂಲಪ್ರಕೃತಿಯ ಸ್ವರೂಪಿಣಿಯೂ, ಧನ-ಧಾನ್ಯ ಸಂಪತ್ತುಗಳನ್ನು ಕರುಣಿಸುವ ಐಶ್ವರ್ಯಾಧಿದೇವತೆಯಾದ ಶ್ರೀ ಮಹಾಲಕ್ಷ್ಮಿಯ ಪೂಜೆ ವೇದ ಕಾಲದಿಂದಲೂ ನಡೆದು ಬಂದಿದೆ. ಶ್ರೀಸೂಕ್ತವೂ ಲಕ್ಷ್ಮಿಯನ್ನು ಹಿರಣ್ಯವರ್ಣಾ ಎಂದೇ ಬಣ್ಣಿಸುತ್ತದೆ. ದಿವ್ಯ ತೇಜೋಮಯವಾದ ಶರೀರದ, ಸಕಲ ಸೌಭಾಗ್ಯ ದೇವತೆಯಾದ ಶ್ರೀ ಮಹಾಲಕ್ಷ್ಮಿಯ ರೂಪ ನಾಮಗಳು ಹಲವು.

ಈ ಮಹಾಲಕ್ಷ್ಮಿಯ ಅನುಗ್ರಹವಿಲ್ಲದೆ ಜೀವನ ಸುಖಮಯವಾಗಲಾರದು ಆದ್ದರಿಂದಲೇ ಹಿರಿಯರು "ಅರ್ಥಾಃ ಬಹಿಶ್ಚರಾ ಪ್ರಾಣಾಃ" ಎಂದರೆ ಹಣವು ನಮ್ಮ ಶರೀರದ ಹೊರಗೆ ತಿರುಗಾಡುವ ಪ್ರಾಣ ಎಂದಿದ್ದಾರೆ. ಹಣವಿಲ್ಲದವನ ಬಾಳು ತುಂಬ ಕಷ್ಟಕರ. ಈಗಿನ ಕಾಲದಲ್ಲಂತೂ ಹಣವಿಲ್ಲದೆ ಅರೆ ಘಳಿಗೆಯೂ ಬದುಕು ಸಾಗಿಸುವುದು ಕಷ್ಟ. ಹೀಗಾಗಿ ಎಲ್ಲರಿಗೂ ನಾವು ಹಣಗಳಿಸೋಣ, ಸ್ಥಿತಿವಂತರಾಗೋಣ, ಎಂಬ ಬಯಕೆ ತುಂಬಾ ಸಹಜವಾಗಿರುತ್ತದೆ.

http://poojavidhana.blogspot.com/

ಹಣವೇ ಜೀವನದ ಸರ್ವಸ್ವವಲ್ಲ; ಆದರೆ ಹಣವಿಲ್ಲದ ಬಾಳು ದುರ್ಭರವಾಗುತ್ತದೆ. ಹಣವನ್ನು ಒಳ್ಳೆಯ ರೀತಿ ಸಂಪಾದನೆ ಮಾಡಿ ಸದ್ವಿನಿಯೋಗ ಮಾಡಿದರೆ ಬಾಳು ಸಾರ್ಥಕವಾಗಬಲ್ಲದು. ಇದಕ್ಕೆ ದೈವ ಕೃಪೆ ಅಗತ್ಯವಾದುದು. ಅದೃಷ್ಟವು ಭಗವಂತನ ಕೃಪೆಯೇ ಆಗಿದೆ. ಹಣವನ್ನು ಮಹಾಲಕ್ಷ್ಮಿಯ ಚಲಿಸುವ ರೂಪ ಎನ್ನಬಹುದು.

ಧನ-ಧಾನ್ಯ, ಪಶು ಸಂಪದಗಳನ್ನು ನೀಡಿ ಭಕ್ತರನ್ನು ಅನುಗ್ರಹಿಸುವ ದಾಯಾಮಾತೆಯಾದ ಮಹಾಲಕ್ಷ್ಮಿಯ ಪೂಜಾ ವಿಧಾನದಲ್ಲಿ ವೈವಿಧ್ಯತೆ ಇದೆ. ಶ್ರೀಸೂಕ್ತ, ಭೂಸೂಕ್ತ, ಭಾಗ್ಯಸೂಕ್ತಗಳು - ವೈದಿಕ ಸಂಪ್ರದಾಯದ ಪೂಜೆಯಾದರೆ, ಸ್ತೋತ್ರ, ಕವಚ ಅಷ್ಟೋತ್ತರ, ಶತನಾಮ, ಸಹಸ್ರನಾಮ ಮತ್ತು ಲಕ್ಷ್ಮೀ ಹೃದಯಗಳು ಪುರಾಣೋಕ್ತವಾಗಿವೆ.

ವೇದ, ಪುರಾಣ, ಸಂಹಿತೆಗಳಲ್ಲಿ ಹೇಳಿರುವ ಲಕ್ಷ್ಮೀ ಪೂಜಾ ಪದ್ಧತಿ, ವಿಧಾನವು ಸರಳವೇ ಆದರೂ ಪ್ರಸ್ತುತ ಆಧುನಿಕ ಜಗತ್ತಿನಲ್ಲಿ ಎಲ್ಲರ ಕೈಗೂ ಎಟಕುವಂತಹುದಲ್ಲ. ಹೀಗಾಗಿ ಮಹಾಲಕ್ಷ್ಮಿಯ ಚಿತ್ರಪಟಕ್ಕೆ ಹೂ, ಅರಿಶಿನ, ಕುಂಕುಮ ಅರ್ಪಿಸಿ, ಧೂಪವನ್ನು ಬೆಳಗುವುದಷ್ಟೇ ಇಂದಿನ ಭಕ್ತರ ಸತ್ಸಂಪ್ರದಾಯವಾಗಿದೆ.

ಶ್ರೀ ಮಹಾಲಕ್ಷ್ಮಿಯ ಆರಾಧನೆಯಲ್ಲಿ ಸರಳವೂ ಶ್ರೇಷ್ಠವೂ ಬಹುಬೇಗ ಫಲವನ್ನು ನೀಡುವ ಪೂಜಾ ವಿಧಾನವೇ **"ಶ್ರೀ ವೈಭವಲಕ್ಷ್ಮೀ ಪೂಜೆ"** ಎನಿಸಿಕೊಂಡಿದೆ. ಈ ಪೂಜಾ ವಿಧಾನದಲ್ಲಿ ಇತರ ವ್ರತಗಳಂತೆ ಕಟ್ಟುನಿಟ್ಟಾದ ಸಂಪ್ರದಾಯಗಳಿಲ್ಲ. ಮಡಿಯ ಗಾಭರಿಯಿಲ್ಲ.

ಇತ್ತೀಚಿನ ದಿನಗಳಲ್ಲಿ ಪ್ರತಿಯೊಂದು ಕುಟುಂಬದಲ್ಲಿಯೂ ಹಣದ ಮುಗ್ಗಟ್ಟು ಸಹಜವಾಗಿದೆ. ಗಳಿಸುವುದಕ್ಕಿಂತ ಖರ್ಚು ಹೆಚ್ಚಾಗಿದೆ. ಚಿಂತಾಗ್ರಸ್ತ ಮುಖಗಳನ್ನು ಎಲ್ಲೆಲ್ಲೂ ನೋಡಬಹುದಾಗಿದೆ.

ಪ್ರತಿ ಮನೆಯ ಗೃಹಿಣಿಯೂ ಆ ಮನೆಯ ಲಕ್ಷ್ಮಿ ಎನಿಸಿಕೊಳ್ಳುತ್ತಾಳೆ. ಆಕೆಯು ಪ್ರಸನ್ನಳಾಗಿದ್ದರೆ ಮನೆಯು ಸುಖದ ಸಾಗರವಾಗುತ್ತದೆ. ಇಲ್ಲದಿದ್ದರೆ ಬದುಕೇ ಜಂಜಾಟವಾಗುತ್ತದೆ. ಇಂತಹ ಪರಿಸ್ಥಿತಿಗಳಲ್ಲಿ ಅದೃಷ್ಟರೂಪಿಣಿಯೂ ಸುಖಸಂಪತ್ತುಗಳನ್ನು ಕೊಡುವ ಅಧಿದೇವತೆಯೂ ಆದ ಶ್ರೀ ಮಹಾಲಕ್ಷ್ಮಿಯ ಪ್ರಾರ್ಥನೆಯೇ ಸುಖ ಸಂಪತ್ತಿನ ಪ್ರಾಪ್ತಿಗೆ ಏಕೈಕ ಹಾಗೂ ಸುಲಭೋಪಾಯವಾಗಿದೆ. http://poojavidhana.blogspot.com/

## ಪೂಜಾ ನಿಯಮಗಳು

**"ಪ್ರಸನ್ನ ವೈಭವ ಲಕ್ಷ್ಮೀ ಪೂಜೆ"ಯನ್ನು ಆಚರಿಸುವುದು ತುಂಬಾ ಸರಳವಾಗಿದೆ ಇದನ್ನು ಯಾರು ಬೇಕಾದರೂ ಆಚರಿಸಬಹುದು. ಮುಖ್ಯವಾಗಿ ಮುತ್ತೈದೆಯರೇ ಈ ಪೂಜೆಯನ್ನು ಮಾಡಿದರೂ, ಬಾಲಕ ಬಾಲಕಿಯರು, ಪುರುಷರೂ ಸಹ ಇದನ್ನು ಶ್ರದ್ಧಾಭಕ್ತಿಗಳಿಂದ ನೆರವೇರಿಸಬಹುದು.**





## ಪೂಜಾ ವಿಧಾನ

1. ಪ್ರತಿ ಶುಕ್ರ ವಾರ ಸಾಯಂಕಾಲದ ಗೋಧೂಳಿ ಸಮಯ (ಅಂದರೆ ಗೋವುಗಳು ಮನೆಗೆ ಬರುವ ಹೊತ್ತು) ಸಂಜೆ 5-30 ರಿಂದ 6-30ರೊಳಗೆ ಲಕ್ಷ್ಮೀಪೂಜೆಯನ್ನು ಮಾಡಬೇಕು.

2. ಶುಕ್ರ ವಾರ ಸಂಜೆ ಲಕ್ಷ್ಮೀದೇವಿಯ ಭಾವಚಿತ್ರದ ಮುಂದೆ ಸಾರಿಸಿ, ಈ ಪುಸ್ತಕದಲ್ಲಿ ಕೊಟ್ಟಿರುವ ರಂಗವಲ್ಲಿ (ಚಕ್ರ)ಯನ್ನು ಹಾಕಿ ಒಂದು ಜೊತೆ ದೀಪಗಳನ್ನು ಹಚ್ಚಿಡಬೇಕು.

3. ದೇವರ ಮುಂದೆ ಸ್ತ್ರೀಯರು ತಮ್ಮ ಚಿನ್ನದ ಆಭರಣಗಳನ್ನು (ಸರ, ಓಲೆ, ಉಂಗುರ ಇತ್ಯಾದಿ) ಸಣ್ಣ ಬಟ್ಟಲು ಅಥವಾ ಕಲಶಪಾತ್ರೆಯಲ್ಲಿರಿಸಬೇಕು.

4. ಈ ಪಾತ್ರೆಗೆ ಅರಿಶಿನ, ಕುಂಕುಮ ಹಾಗೂ ಕೆಂಪು ಹೂಗಳಿಂದ ಅಲಂಕರಿಸಬೇಕು. http://poojavidhana.blogspot.com/

5. ಗಜಲಕ್ಷ್ಮಿಯ ಮುಂದೆ ಇರಿಸಿದ ಈ ಪಾತ್ರೆಯನ್ನೇ ಲಕ್ಷ್ಮಿ ಸಾನಿಧ್ಯವೆಂದು ಭಾವಿಸಿ ಗಂಧದ ಕಡ್ಡಿಯನ್ನು ಹಚ್ಚಿ ಏನಾದರೂ ಸಿಹಿ ಪದಾರ್ಥವನ್ನು ನೈವೇದ್ಯವಾಗಿ ಅರ್ಪಿಸಬೇಕು.

6. ಮಹಾನೈವೇದ್ಯದ ನಂತರ ಪ್ರಸಾದವನ್ನು ಮನೆಯ ಎಲ್ಲ ಸದಸ್ಯರೂ ಕೈಕಾಲು ತೊಳೆದು ಭಕ್ತಿಯಿಂದ ಕೈ ಮುಗಿದು ಸೇವಿಸಬೇಕು. ನಂತರ ಭೋಜನ ಮಾಡಬಹುದು. ಭೋಜನದ ನಂತರ ಪೂಜೆಗೆ ಇರಿಸಿದ ಒಡವೆಗಳನ್ನು ಸ್ವಲ್ಪಕಾಲ ಧರಿಸಿ ನಂತರ ತೆಗೆದಿಡಬಹುದು.

ಹೀಗೆ ಪ್ರಸನ್ನ ವೈಭವ ಲಕ್ಷ್ಮಿಯ ಪೂಜಾ ವಿಧಾನ ತುಂಬ ಸರಳ ಹಾಗೂ ಮಹತ್ವದ್ದಾಗಿದೆ. ಈ ಪೂಜೆಯನ್ನು ಪ್ರತಿ ಶುಕ್ರವಾರ ಭಕ್ತಿ ಶ್ರದ್ಧೆಗಳಿಂದ ಆಚರಿಸಿದರೆ ಮಹಾಲಕ್ಷ್ಮಿಯು ಶಾಶ್ವತವಾಗಿ ಆ ಮನೆಯಲ್ಲಿ ನೆಲೆಸುವಂತಾಗುತ್ತದೆ.

**ಶ್ರದ್ಧೆ ಮಾತ್ರ ಬಹಳ ಮುಖ್ಯವಾದುದು.**



ಈ ಪೂಜೆಯನ್ನು ಮಾಡುವುದರಿಂದ ಕೆಲವರಿಗೆ ತಕ್ಷಣ ಫಲ ದೊರೆತರೆ, ಇನ್ನು ಕೆಲವರಿಗೆ ಐದು ಶುಕ್ರವಾರಗಳ ನಂತರ ಆರ್ಥಿಕ ಮುಗ್ಗಟ್ಟು ಪರಿಹಾರವಾಗಬಹುದು. ಅನೇಕರು ಇದರಿಂದ ಪ್ರಯೋಜನ ಪಡೆದು ಸುಖಿಗಳಾಗಿದ್ದಾರೆ. *'ಗೃಹಿಣೀ ಗೃಹಮುಚ್ಯತೇ'* ಎಂಬಂತೆ ಮನೆಯಾಕೆ ಸಂತೋಷಚಿತ್ತದಿಂದಿದ್ದರೆ ಆ ಮನೆಯು ಸ್ವರ್ಗವಾಗುತ್ತದೆ, ನಂದನವನವಾಗುತ್ತದೆ.

## ವಿಶೇಷ ನಿಯಮಗಳು

***ಮಣೆಯ ಮೇಲೆ ಸ್ವಲ್ಪ ಅಕ್ಕಿಯನ್ನು ಹರಡಿ ಬಟ್ಟಲಲ್ಲಿ ಯಾವುದಾದರೂ ಆಭರಣವಿಟ್ಟು ಅದರಲ್ಲಿ ವೈಭವಲಕ್ಷ್ಮಿಯನ್ನು ಪೂಜಿಬೇಕು***

1. ಪೂಜೆಗಾಗಿ ಚಿನ್ನದ ಆಭರಣಗಳನ್ನು ಇಡಲು ಸಾಧ್ಯವಿಲ್ಲದವರು ಬೆಳ್ಳಿಯ ರೂಪಾಯಿ ಅಥವಾ ಲಕ್ಷ್ಮೀದೇವಿಯ (ಗಜಲಕ್ಷ್ಮಿ) ಸುಂದರವಾದ ಚಿತ್ರ ಅಥವಾ ಈ ಪುಸ್ತಕದಲ್ಲಿ ಕೊಟ್ಟಿರುವ ಚಿತ್ರವನ್ನು ಪೂಜಿಸಿ, ಪರಿಸ್ಥಿತಿ ಸುಧಾರಿಸಿದ ಮೇಲೆ ಚಿನ್ನದ ಆಭರಣಗಳನ್ನಿಟ್ಟು ಲಕ್ಷ್ಮೀ ದೇವಿಯನ್ನು ಪೂಜಿಸಬಹುದು.

2. ಈ ಪೂಜೆಯನ್ನು ಮಾಡುವವರು ಐದು ಶುಕ್ರವಾರಗಳಲ್ಲಿ ಕೊನೆಯ ಶುಕ್ರವಾರ ಎಂಟು ಜನ ಮುತ್ತೈದೆಯರಿಗೆ ಅರಿಶಿನ, ಕುಂಕುಮ ತಾಂಬೂಲ ಹಾಗೂ ಈ ಪುಸ್ತಕದ ಒಂದು ಪ್ರತಿಯನ್ನು ದಾನ ಮಾಡಿದರೆ ಅತ್ಯುತ್ತಮ ಫಲ ದೊರೆಯುವುದು ನಿಶ್ಚಿತ. http://poojavidhana.blogspot.com/

3. ಲಕ್ಷ್ಮೀದೇವಿಯ ಭಕ್ತರು-ಆರ್ಥಿಕ ಮುಗ್ಗಟ್ಟು, ವಿವಾಹ, ಉದ್ಯೋಗ ಮತ್ತು ಆಪತ್ತುಗಳ ಹಾಗೂ ಮನಃಕ್ಲೇಶಗಳ ನಿವಾರಣೆಗೆ ವಿಶೇಷವಾಗಿ ಈ ಪೂಜೆಯನ್ನು ಆರಂಭಿಸಿದರೆ ತಾವು ನೆನೆಸಿಕೊಂಡ ಕಾರ್ಯಸಿದ್ಧಿಯಾದ ನಂತರ ಬರುವ ಶುಕ್ರವಾರದ ಸಂಜೆ ಎಂಟು ಜನ ಮುತ್ತೈದೆಯರಿಗೆ ಅರಿಶಿನ, ಕುಂಕುಮ, ಬಳೆ ಹಾಗೂ ಈ ಪುಸ್ತಕದ ಒಂದು ಪ್ರತಿಯನ್ನು ದಾನವಾಗಿ ನೀಡಬೇಕು. ಇದರಿಂದ 64 ಜನರು ಲಕ್ಷ್ಮೀ ಪೂಜೆಯನ್ನು





ಆಚರಿಸಿದ ಪುಣ್ಯ ದೊರೆಯುವುದು. ಕುಟುಂಬದ ಎಲ್ಲರಿಗೂ, ಸರ್ವಮಂಗಳವಾಗುವುದು.

4. ಲಕ್ಷ್ಮೀದೇವಿಯ ನೈವೇದ್ಯಕ್ಕೆ - ಹುರಿಗಡಲೆ, ಬೆಲ್ಲ, ರಸಬಾಳೆಹಣ್ಣು ಗೋಧಿಯ ಪಾಯಸ ತುಂಬಾ ಉತ್ತಮವಾದುದು. ಐದನೆಯ ವಾರ ಗೋಧಿಯ ಪಾಯಸವನ್ನು ನೈವೇದ್ಯ ಮಾಡಬೇಕು.

5. ಒಮ್ಮೆ ಈ ಪೂಜೆಯನ್ನು ಪ್ರಾರಂಭಿಸಿದ ಮೇಲೆ ಕಾರ್ಯಸಿದ್ಧಿಯಾಗುವ ವರೆಗೂ ಇದನ್ನು ನಿಲ್ಲಿಸಬಾರದು. ಕೇವಲ 15 ಅಥವಾ 20 ನಿಮಿಷಗಳಲ್ಲಿ ಆಚರಿಸಬಹುದಾದ ಈ ಪೂಜೆಯನ್ನು ನಿಲ್ಲಿಸುವ ಸಂದರ್ಭ ಬಹುಶಃ ಬರಲಾರದು. http://poojavidhana.blogspot.com/

6. ಪೂಜೆಯನ್ನು ಮಾಡುವವರು ಶುಕ್ರುವಾರದ ದಿನ ಬಹಿಷ್ಠೆ (ಹೊರಗೆ) ಯಾಗಿದ್ದರೆ ಅವರ ಬದಲು ಅವರ ಪತಿ ಅಥವಾ ಮಕ್ಕಳು ಇದನ್ನು ಯಾವುದೇ ಯೋಚನೆ ಇಲ್ಲದೆ ಆಚರಿಸಬಹುದು. ಒಂದು ಮನೆಯಲ್ಲಿ ಒಬ್ಬರಿಗಿಂತ ಹೆಚ್ಚು ಮುತ್ತೈದೆಯರಿದ್ದರೆ ಅವರವರ ಅನುಕೂಲದಂತೆ ಒಟ್ಟಿಗೆ ಅಥವಾ ಪ್ರತ್ಯೇಕವಾಗಿ ಪೂಜೆಯನ್ನು ಆಚರಿಸಬಹುದು. ಆದರೆ ಕೊನೆಯಲ್ಲಿ ಆರತಿಯನ್ನು ಒಟ್ಟಿಗೇ ಮಾಡಬೇಕು.

7. ಪ್ರವಾಸದಲ್ಲಿರುವಾಗ ಲಕ್ಷ್ಮಿಯ ಚಿತ್ರಪಟ, ಪೂಜಾವಿಧಾನದ ಪುಸ್ತಕಗಳನ್ನು ಜೊತೆಯಲ್ಲಿಟ್ಟುಕೊಂಡು ಶುಕ್ರವಾರ ಸಾಯಂಕಾಲ ಯಥಾಶಕ್ತಿ, ನೈವೇದ್ಯಮಾಡಿ, ಪೂಜಿಸಿ ವ್ರತವು ತಪ್ಪದಂತೆ ನೋಡಿಕೊಳ್ಳಬೇಕು.

8. ಎಷ್ಟೆಷ್ಟು ಜನ ಈ ಪೂಜಾ ವಿಧಾನವನ್ನು ನಿಮ್ಮಿಂದ ತಿಳಿದುಕೊಳ್ಳುತ್ತಾರೆಯೋ ಅಷ್ಟಷ್ಟು ಪುಣ್ಯ - ಹೆಚ್ಚು ಧನಲಾಭ ನಿಮಗಾಗುತ್ತದೆ.

ಹೀಗೆ ಸರಳ ಪೂಜೆಯಿಂದ ದೊಡ್ಡ ಲಾಭ ಪಡೆಯುವ ಏಕೈಕ ಪೂಜೆ "ಶ್ರೀ ವೈಭವಲಕ್ಷ್ಮೀ ಪೂಜೆ"ಯಾಗಿದೆ.

## ಪೂರ್ವ ಸಿದ್ಧತೆ

1. ಪೂಜಾಸ್ಥಳವನ್ನು ಶುದ್ಧಮಾಡಿ, ಈ ಪುಸ್ತಕದಲ್ಲಿ ಕೊಟ್ಟಿರುವ ರಂಗವಲ್ಲಿ ಹಾಕಿ ಪೂರ್ವಾಭಿಮುಖವಾಗಿ ಲಕ್ಷ್ಮಿಯನ್ನು ಇರಿಸಬೇಕು.
2. ಪೂಜಾಸ್ಥಳದ ಸಮಿಾಪದಲ್ಲಿ ಹಾಸಿಗೆ ಬಟ್ಟೆಗಳನ್ನು ಇಡಬಾರದು. ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಎತ್ತರದ ಗೂಡಿನಲ್ಲಿ ಪೂಜೆಯನ್ನು ಮಾಡಬಹುದು.
3. ಪೂಜಾಕಾಲದಲ್ಲಿ ಕೈಕಾಲು ಮುಖಗಳನ್ನು ತೊಳೆದುಕೊಂಡು ಹಣೆಗೆ ಕುಂಕುಮವನ್ನು ಇಟ್ಟುಕೊಂಡು ನಿರ್ಮಲವಾದ ಮನಸ್ಸಿನಿಂದ ಪೂಜೆಯನ್ನು ಆಚರಿಸಬೇಕು. http://poojavidhana.blogspot.com/
4. ಪೂಜೆಗೆ ಅಗತ್ಯವಾಗ ಅರಿಶಿನ, ಕುಂಕುಮ, ಮಂತ್ರಾಕ್ಷತೆ ಬಟ್ಟಲು, ಹೂ ತುಂಬಿದ ಪಾತ್ರೆ, ಗೆಜ್ಜೆ, ವಸ್ತ್ರ, ಮಂಗಳಾರತಿಗೆ ಗಡ್ಡೆ ಕರ್ಪೂರ ಅಥವಾ ಮೂರು, ಐದು, ಒಂಭತ್ತು ಎಳೆಯ ಬತ್ತಿಯನ್ನು ಸಿದ್ಧ ಪಡಿಸಿಕೊಳ್ಳಬೇಕು.
5. ಪೂಜಾಸಲಕರಣೆಗಳು ಕಾಲುಗಳಿಗೆ ತಗಲುವಂತಿರಬಾರದು.
6. ಶ್ರೀಮನ್ನಾರಾಯಣನನ್ನು ಮನದಲ್ಲಿ ಸ್ಮರಿಸದೆ ಶ್ರೀಲಕ್ಷ್ಮೀಪೂಜೆಯನ್ನು ಮಾಡಬಾರದು.

## ಶ್ರೀ ಪ್ರಸನ್ನ ವೈಭವಲಕ್ಷ್ಮೀ ಪೂಜಾಕ್ರಮ

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ |
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪ ಶಾಂತಯೇ ||

(ಕೈಜೋಡಿಸಿ ಪ್ರಾರ್ಥಿಸಬೇಕು)





## ಶ್ರೀಮನ್ನಾರಾಯಣ ನಾಮಸ್ಮರಣೆ :

ಕೇಶವಾಯ ನಮಃ
ನಾರಾಯಣಾಯ ನಮಃ
ಮಾಧವಾಯ ನಮಃ
ಗೋವಿಂದಾಯ ನಮಃ
ವಿಷ್ಣವೇ ನಮಃ
ಮಧುಸೂದನಾಯ ನಮಃ
ತ್ರಿವಿಕ್ರಮಾಯ ನಮಃ
ವಾಮನಾಯ ನಮಃ
ಶ್ರೀಧರಾಯ ನಮಃ
ಹೃಷೀಕೇಶಾಯ ನಮಃ
ಪದ್ಮನಾಭಾಯ ನಮಃ
ದಾಮೋದರಾಯ ನಮಃ
ಸಂಕರ್ಷಣಾಯ ನಮಃ
ವಾಸುದೇವಾಯ ನಮಃ
ಪ್ರದ್ಯುಮ್ನಾಯ ನಮಃ
ಅನಿರುದ್ಧಾಯ ನಮಃ
ಪುರುಷೋತ್ತಮಾಯ ನಮಃ
ಅಧೋಕ್ಷಜಾಯ ನಮಃ
ನಾರಸಿಂಹಾಯ ನಮಃ
ಅಚ್ಯುತಾಯ ನಮಃ
ಜನಾರ್ದನಾಯ ನಮಃ
ಉಪೇಂದ್ರಾಯ ನಮಃ
ಹರಯೇ ನಮಃ
ಶ್ರೀಕೃಷ್ಣಾಯ ನಮಃ

**ಶ್ರೀಮನ್ಮಹಾಗಣಾಧಿಪತಯೇ ನಮಃ | ಇಷ್ಟದೇವತಾಭ್ಯೋನಮಃ |**
**ಕುಲದೇವತಾಭ್ಯೋ ನಮಃ | ಸರ್ವೇಭ್ಯೋ ದೇವೇಭ್ಯೋನಮಃ |**

**ಶಾಂತಿರಸ್ತು | ಪುಷ್ಟಿರಸ್ತು | ಅವಿಘ್ನಮಸ್ತು ||**

**ಆಗಮಾರ್ಥಂ ತು ದೇವಾನಾಂ ಗಮನಾರ್ಥಂತು ರಕ್ಷಸಾಂ|**
**ಕುರುಘಂಟಾರವಂ ತತ್ರ ದೇವತಾಹ್ವಾನ ಲಾಂಛನಂ||**

ಎಂದು ಪಠಿಸಿ ಘಂಟಾನಾದವನ್ನು ಮಾಡಿ

http://poojavidhana.blogspot.com/

**ಸಂಕಲ್ಪ :** (ಕೈಯಲ್ಲಿ ಅಕ್ಷತೆಕಾಳನ್ನು ಹಿಡಿದು)

**ಶುಭೇ ಶೋಭನೇ ಮುಹೂರ್ತೇ| ಆದ್ಯ ಬ್ರಹ್ಮಣಃ| ದ್ವಿತೀಯ ಪರಾರ್ಧೇ| ಶ್ರೀ ಶ್ವೇತವರಾಹಕಲ್ಪೇ| ವೈವಸ್ವತಮನ್ವಂತರೇ| ಕಲಿಯುಗೇ| ಭರತವರ್ಷೇ| ಭರತಖಂಡೇ | ಜಂಬೂದ್ವೀಪೇ ದಂಡಕಾರಣ್ಯೇ| ಗೋದಾವರ್ಯಾಃ| ದಕ್ಷಿಣೇ ತೀರೇ| ಶಾಲೀವಾಹನ ಶಕೇ|**



**ಬೌದ್ಧಾವತಾರೇ| ಶ್ರೀರಾಮಕ್ಷೇತ್ರೇ| ಚಾಂದ್ರಮಾನೇನ ಪ್ರಭವಾದಿ ಷಷ್ಠಿ ಸಂವತ್ಸರಾಣಾಂ ಮಧ್ಯೆ.... ಸಂವತ್ಸರಸ್ಯ .... ಆಯನೆ.... ಋತೌ...... ಮಾಸೇ ....... ಪಕ್ಷೇ....... ತಿಥೌ ........ ವಾಸರೇ ........ ನಕ್ಷತ್ರೇ ಏವಂ ಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಶ್ರೀಪ್ರಸನ್ನ ವೈಭವಲಕ್ಷ್ಮೀ ವ್ರತಮಹಂ ಕರಿಷ್ಯೇ ||** (ಅಕ್ಷತೆಕಾಳನ್ನು, ನೀರನ್ನು ತಟ್ಟೆಗೆ ಹಾಕಬೇಕು)

**ಕಲಶಪೂಜಾ :**

**ಗಂಗೇಚ ಯಮುನೇ ಚೈವ ಗೋದಾವರೀ ಸರಸ್ವತೀ |**
**ನರ್ಮದೇ ಸಿಂಧು ಕಾವೇರಿ ಜಲೇऽಸ್ಮಿನ್ ಸನ್ನಿಧಿಂ ಕುರು ||**

(ಕಲಶದ ನೀರನ್ನು ಪೂಜಿಸಿ, ಆ ನೀರನ್ನು ತಲೆಯಮೇಲೆ ಹಾಗೂ ಪೂಜಾ ದ್ರವ್ಯದ ಮೇಲೆ ಪ್ರೋಕ್ಷಿಸಬೇಕು.) http://poojavidhana.blogspot.com/

**ತತ್ರಾದೌ ನಿರ್ವಿಘ್ನತಾ ಸಿದ್ಧ್ಯರ್ಥಂ ಶ್ರೀಮನ್ಮಹಾಗಣಪತಿ ಪೂಜಾಂ ಕರಿಷ್ಯೇ||**

**ವಕ್ರತುಂಡ ಮಹಾಕಾಯ ಕೋಟಿಸೂರ್ಯ ಸಮಪ್ರಭ |**
**ನಿರ್ವಿಘ್ನಂ ಕುರುಮೇದೇವ | ಸರ್ವಕಾರ್ಯೇಷು ಸರ್ವದಾ ||**

(ಎಂದು ಅರಿಶಿನ ಕುಂಕುಮದಿಂದ ಪೂಜಿಸಬೇಕು)

## ಶ್ರೀ ವೈಭವ ಲಕ್ಷ್ಮೀ ಧ್ಯಾನಂ :

*ಯಾಸಾ ಪದ್ಮಾಸನಸ್ಥಾ ವಿಪುಲಕಟೀ ಪದ್ಮಪತ್ರಾಯತಾಕ್ಷೀ |*
*ಗಂಭೀರಾ ವರ್ತನಾಭಿಸ್ತನಭರ ನಮಿತಾ ಶುಭ್ರವಸ್ತ್ರೋತ್ತರೀಯಾ |*
*ಲಕ್ಷ್ಮೀರ್ದಿವ್ಯೈರ್ಗಜೇಂದ್ರೈ ಮಣಿಗಣಖಚಿತಾ ವಾಸಿತಾ ಹೇಮಕುಂಭೈ |*
*ನಿತ್ಯಂ ಸಾ ಪದ್ಮಹಸ್ತಾ ಮಮ ವಸತು ಗೃಹೇ ಸರ್ವಮಾಂಗಲ್ಯಯುಕ್ತಾ |*

(ಕೈ ಜೋಡಿಸಿ ಪ್ರಾರ್ಥಿಸಿ ಪೂಜಾಕಲಶಕ್ಕೆ ಹೂ, ಅಕ್ಷತೆ ಅರ್ಪಿಸುವುದು)





**ಸರ್ವಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಿಕೇ |**
**ಶರಣ್ಯೇ ತ್ರ್ಯಂಬಕೇ ದೇವೀ ನಾರಾಯಣೀ ನಮೋऽಸ್ತುತೇ ||**

**ಆವಾಹಯಾಮಿ | ಆಸನಂ ಸಮರ್ಪಯಾಮಿ |**
**ಅರ್ಘ್ಯ- ಪಾದ್ಯ-ಆಚಮನ-ಸ್ನಾನ-ವಸ್ತ್ರ-ಅಕ್ಷತಾಂ ಸಮರ್ಪಯಾಮಿ ||**

ಲಕ್ಷ್ಮೀದೇವಿಗೆ ಶೋಡಶೋಪಚಾರ ಪೂಜೆಯನ್ನು
ಕ್ರಮವಾಗಿ ಮಾಡಿದಂತೆ ಭಾವಿಸುವುದು.
(ಹೂ, ಅಕ್ಷತೆಕಾಳು ಅರ್ಪಿಸುವುದು)

*(ಕೈ ಜೋಡಿಸಿ)* http://poojavidhana.blogspot.com/

*ವಂದೇ ಲಕ್ಷ್ಮೀಂ ಪರಶಿವಮಯೀಂ ಶುದ್ಧ ಜಾಂಬೂನದಾಭಾಂ |*
*ತೇಜೋರೂಪಾಂ ಕನಕವಸನಾ ಸರ್ವಭೂಷೋಜ್ವಲಾಂಗೀ ||*

*ಬೀಜಾಪೂರಂ ಕನಕ ಕಲಶಂ ಹೇಮಪದ್ಮಂ ದಧಾನಾಂ |*
*ಆದ್ಯಾಂ ಶಕ್ತಿ ಸಕಲ ಜನನೀಂ ವಿಷ್ಣು ನಾಮಾಂಕ ಸಂಸ್ಥಾಮ್ ||*

(ಎಂದು ಪಠಿಸಿ ಹೂ, ಅಕ್ಷತೆ ಗೆಜ್ಜೆವಸ್ತ್ರಗಳನ್ನು ಅರ್ಪಿಸಬೇಕು)

ಶ್ರೀ ವೈಭವ ಲಕ್ಷ್ಮೈ ನಮಃ| ಗಂಧಂ ಸಮರ್ಪಯಾಮಿ||
ಶ್ರೀ ವೈಭವ ಲಕ್ಷ್ಮೈ ನಮಃ| ಹರಿದ್ರಾ ಕುಂಕುಮ ಸಮರ್ಪಯಾಮಿ||
ಶ್ರೀ ವೈಭವ ಲಕ್ಷ್ಮೈ ನಮಃ| ಅಕ್ಷತಾಂ ಸಮರ್ಪಯಾಮಿ |
ಶ್ರೀ ವೈಭವ ಲಕ್ಷ್ಮೈ ನಮಃ| ನಾನಾವಿಧ ಪರಿಮಳ ದ್ರವ್ಯಾನಿ ಸಮರ್ಪಯಾಮಿ ||

**ಮಂತ್ರಪೂಜಾ :** (ಕೈಜೋಡಿಸಿ ಪ್ರಾರ್ಥಿಸಬೇಕು)

ಹಿರಣ್ಯವರ್ಣಾಂ ಹರಿಣೀಂ ಸುವರ್ಣ ರಜತಸ್ರಜಾಂ|
ಚಂದ್ರಾಂ ಹಿರಣ್ಮಯೀಂ ಲಕ್ಷ್ಮೀಂ ಜಾತವೇದೋಮ ಆವಹ ||

|| ಶ್ರೀ ಸೂಕ್ತಪೂಜಾಂ ಸಮರ್ಪಯಾಮಿ ||

ಧೂಪ-ದೀಪ-ನೈವೇದ್ಯಾದಿ ಸಮಸ್ತರಾಜೋಪಚಾರ ಪೂಜಾ ಸಮರ್ಪಯಾಮಿ
(ಗಂಧ, ಹೂ, ಅಕ್ಷತೆ ಅರ್ಪಿಸಿ ನಮಸ್ಕರಿಸಬೇಕು)

## ಸಿದ್ಧಿ ಲಕ್ಷ್ಮೀ ಸ್ತೋತ್ರಮ್

ಶ್ರೀದೇವೀ ಪ್ರಥಮಾ ಪ್ರೋಕ್ತಾ ದ್ವಿತೀಯಾ ಅಮೃತೋದ್ಭವಾ|
ತೃತೀಯಾ ಕಮಲಾದೇವಿ ಚತುರ್ಥೀ ಲೋಕಸುಂದರೀ|| ||೧||

ಪಂಚಮಿಾ ವಿಷ್ಣುಪತ್ನೀ ಚ ಷಷ್ಠೀ ಚ ಭುವನತ್ರಯಾ|
ಸಪ್ತಮಿಾತು ವರಾರೋಹಾ ಅಷ್ಟಮಿಾ ದೇವಿಕಾ || ||೨ ||

ಸಾರಂಗಪಾಣೀ ನವಮಿಾ, ದಶಮಿಾ ಹರಿವಲ್ಲಭಾ|
ಏಕಾದಶೀ ಮಹಾಲಕ್ಷ್ಮೀ ದ್ವಾದಶೀ ಲೋಕಪೂಜಿತಾ|| ||೩||

ಇದಂ ಮತ್ರಾತ್ಮಕಂ ಸ್ತೋತ್ರಂ ಯಃ ಪಠೇತ್ ಚ ಸುಚಿನ್ನರಃ|
ತಸ್ಯ ಸರ್ವಾನಿ ಕಾರ್ಯಾನಿ ಸಿದ್ಧಂತ್ಯೇವ ನ ಸಂಶಯಃ|

(ಈಗ ಮಾಡಿದ ಸಿಹಿ ತಿಂಡಿ ಹಾಗೂ ಪ್ರಸಾದಗಳ ಮೇಲೆ ಕಲಶೋಧಕವನ್ನು ಪ್ರೋಕ್ಷಿಸಿ ಮಹಾನೈವೇದ್ಯವನ್ನು ದೇವಿಗೆ ಅರ್ಪಿಸಬೇಕು)

http://poojavidhana.blogspot.com/

## ಶ್ರೀಮಹಾಲಕ್ಷ್ಮೀ
## ಅಷ್ಟೋತ್ತರ ಶತನಾಮಾವಳಿಃ ಪೂಜಾ

(ಬಿಡಿಹೂವಿನಿಂದ ಪೂಜಿಸುವುದು)

ಓಂ ಪ್ರಕೃತ್ಯೈ ನಮಃ
ಓಂ ವಿಕೃತ್ಯೈ ನಮಃ
ಓಂ ವಿದ್ಯಾಯೈ ನಮಃ
ಓಂ ಸರ್ವಭೂತಹಿತಪ್ರದಾಯೈ ನಮಃ
ಓಂ ಶ್ರದ್ಧಾಯೈ ನಮಃ
ಓಂ ವಿಭೂತ್ಯೈ ನಮಃ
ಓಂ ಸುರಭ್ಯೈ ನಮಃ
ಓಂ ಪರಮಾತ್ಮಿಕಾಯೈ ನಮಃ
ಓಂ ವಾಚೇ ನಮಃ
ಓಂ ಪದ್ಮಾಲಯಾಯೈ ನಮಃ ೧೦
ಓಂ ಪದ್ಮಾಯೈ ನಮಃ
ಓಂ ಶುಚಯೇ ನಮಃ
ಓಂ ಸುಧಾಯೈ ನಮಃ
ಓಂ ಸ್ವಾಹಾಯೈ ನಮಃ
ಓಂ ಸ್ವಧಾಯೈ ನಮಃ
ಓಂ ಧನ್ಯಾಯೈ ನಮಃ
ಓಂ ಹಿರಣ್ಮಯ್ಯೈ ನಮಃ
ಓಂ ಲಕ್ಷ್ಮ್ಯೈ ನಮಃ
ಓಂ ನಿತ್ಯಪುಷ್ಟಾಯೈ ನಮಃ
ಓಂ ವಿಭಾವರ್ಯೈ ನಮಃ ೨೦





ಓಂ ಅದಿತ್ಯೈ ನಮಃ
ಓಂ ದಿತ್ಯೈ ನಮಃ
ಓಂ ದೀಪ್ತಾಯೈ ನಮಃ
ಓಂ ವಸುಧಾಯೈ ನಮಃ
ಓಂ ವಸುಧಾರಿಣ್ಯೈ ನಮಃ
ಓಂ ಕಮಲಾಯೈ ನಮಃ
ಓಂ ಕಾಂತಾಯೈ ನಮಃ
ಓಂ ಕಾಮಾಕ್ಷ್ಯೈ ನಮಃ
ಓಂ ಕ್ರೋಧಸಂಭವಾಯೈ ನಮಃ
ಓಂ ಅನುಗ್ರಹಪ್ರದಾಯೈ ನಮಃ೩೦
ಓಂ ಬುದ್ಧೆಯೈ ನಮಃ
ಓಂ ಅನಘಾಯೈ ನಮಃ
ಓಂ ಹರಿವಲ್ಲಭಾಯೈ ನಮಃ
ಓಂ ಅಶೋಕಾಯೈ ನಮಃ
ಓಂ ಅಮೃತಾಯೈ ನಮಃ
ಓಂ ದೀಪ್ತಾಯೈ ನಮಃ
ಓಂ ಲೋಕಶೋಕವಿನಾಶಿನ್ಯೈ ನಮಃ
ಓಂ ಧರ್ಮನಿಲಯಾಯೈ ನಮಃ
ಓಂ ಕರುಣಾಯೈ ನಮಃ
ಓಂ ಲೋಕಮಾತ್ರೇ ನಮಃ ೪೦
ಓಂ ಪದ್ಮಪ್ರಿಯಾಯೈ ನಮಃ
ಓಂ ಪದ್ಮಹಸ್ತಾಯೈ ನಮಃ
ಓಂ ಪದ್ಮಾಕ್ಷ್ಯೈ ನಮಃ
ಓಂ ಪದ್ಮಸುಂದರ್ಯೈ ನಮಃ
ಓಂ ಪದ್ಮೋದ್ಭವಾಯೈ ನಮಃ
ಓಂ ಪದ್ಮಮುಖ್ಯೈ ನಮಃ
ಓಂ ಪದ್ಮನಾಭಪ್ರಿಯಾಯೈ ನಮಃ
ಓಂ ರಮ್ಯಾಯೈ ನಮಃ
ಓಂ ಪದ್ಮಮಾಲಾಧರಾಯೈ ನಮಃ
ಓಂ ದೇವ್ಯೈ ನಮಃ ೫೦
ಓಂ ಪದ್ಮಿನ್ಯೈ ನಮಃ
ಓಂ ಪದ್ಮಗಂಧಿನ್ಯೈ ನಮಃ
ಓಂ ಪುಣ್ಯಗಂಧಾಯೈ ನಮಃ
ಓಂ ಸುಪ್ರಸನ್ನಾಯೈ ನಮಃ
ಓಂ ಪ್ರಸಾದಾಭಿಮುಖ್ಯೈ ನಮಃ
ಓಂ ಪ್ರಭಾಯೈ ನಮಃ
ಓಂ ಚಂದ್ರವದನಾಯೈ ನಮಃ
ಓಂ ಚಂದ್ರಾಯೈ ನಮಃ
ಓಂ ಚಂದ್ರಸಹೋದರ್ಯೈ ನಮಃ
ಓಂ ಚತುರ್ಭುಜಾಯೈ ನಮಃ ೬೦
ಓಂ ಚಂದ್ರರೂಪಾಯೈ ನಮಃ
ಓಂ ಇಂದಿರಾಯೈ ನಮಃ
ಓಂ ಇಂದುಶೀತಲಾಯೈ ನಮಃ
ಓಂ ಆಹ್ಲಾದಜನನ್ಯೈ ನಮಃ
ಓಂ ಪುಷ್ಟ್ಯೈ ನಮಃ
ಓಂ ಶಿವಾಯೈ ನಮಃ
ಓಂ ಶಿವಕರ್ಯೈ ನಮಃ
ಓಂ ಸತ್ಯೈ ನಮಃ
ಓಂ ವಿಮಲಾಯೈ ನಮಃ
ಓಂ ವಿಶ್ವಜನನ್ಯೈ ನಮಃ ೭೦
ಓಂ ತುಷ್ಟ್ಯೈ ನಮಃ
ಓಂ ದಾರಿದ್ರ್ಯನಾಶಿನ್ಯೈ ನಮಃ
ಓಂ ಪ್ರೀತಪುಷ್ಕರಿಣ್ಯೈ ನಮಃ
ಓಂ ಶಾಂತಾಯೈ ನಮಃ
ಓಂ ಶುಕ್ಲಮಾಲ್ಯಾಂಬರಾಯೈ ನಮಃ
ಓಂ ಶ್ರಿಯೈ ನಮಃ
ಓಂ ಭಾಸ್ಕರ್ಯೈ ನಮಃ
ಓಂ ಬಿಲ್ವನಿಲಯಾಯೈ ನಮಃ

http://poojavidhana.blogspot.com/



ಓಂ ವರಾರೋಹಾಯೈ ನಮಃ
ಓಂ ಯಶಸ್ವಿನ್ಯೈ ನಮಃ ೮೦
ಓಂ ವಸುಂದರಾಯೈ ನಮಃ
ಓಂ ಉದಾರಾಂಗಾಯೈ ನಮಃ
ಓಂ ಹರಿಣ್ಯೈ ನಮಃ
ಓಂ ಹೇಮಮಾಲಿನ್ಯೈ ನಮಃ
ಓಂ ಧನಧಾನ್ಯಕರ್ಯೈ ನಮಃ
ಓಂ ಸಿದ್ಧಯೇ ನಮಃ
ಓಂ ಸ್ತ್ರೈಣಸೌಮ್ಯಾಯೈ ನಮಃ
ಓಂ ಶುಭಪ್ರದಾಯೈ ನಮಃ
ಓಂ ನೃಪವೇಶ್ಮಗತಾನಂದಾಯೈ ನ|
ಓಂ ವರಲಕ್ಷ್ಮ್ಯೈ ನಮಃ ೯೦
ಓಂ ವಸುಪ್ರದಾಯೈ ನಮಃ
ಓಂ ಶುಭಾಯೈ ನಮಃ
ಓಂ ಹಿರಣ್ಯಪ್ರಾಕಾರಾಯೈ ನಮಃ
ಓಂ ಸಮುದ್ರತನಯಾಯೈ ನಮಃ
ಓಂ ಜಯಾಯೈ ನಮಃ
ಓಂ ಮಂಗಳಾದೇವ್ಯೈ ನಮಃ
ಓಂ ವಿಷ್ಣುವಕ್ಷಸ್ಥಲಸ್ಥಿತಾಯೈ ನಮಃ
ಓಂ ವಿಷ್ಣುಪತ್ನ್ಯೈ ನಮಃ
ಓಂ ಪ್ರಸನ್ನಾಕ್ಷ್ಯೈ ನಮಃ
ಓಂ ನಾರಾಯಣಸಮಾಶ್ರಿತಾಯೈ ನ|
ಓಂ ದಾರಿದ್ರ್ಯಧ್ವಂಸಿನ್ಯೈ ನಮಃ
ಓಂ ದೇವ್ಯೈ ನಮಃ
ಓಂ ಸರ್ವೋಪದ್ರವನಿವಾರಿಣ್ಯೈ ನ|
ಓಂ ನವದುರ್ಗಾಯೈ ನಮಃ
ಓಂ ಮಹಾಕಾಳ್ಯೈ ನಮಃ
ಓಂ ಬ್ರಹ್ಮವಿಷ್ಣುಶಿವಾತ್ಮಿಕಾಯೈನಮಃ
ಓಂ ತ್ರಿಕಾಲಜ್ಞಾನಸಂಪನ್ನಾಯೈ ನ|
ಓಂ ಭುವನೇಶ್ವರ್ಯೈ ನಮಃ

|| ಶ್ರೀ ಮಹಾಲಕ್ಷ್ಮೀ ಅಷ್ಟೋತ್ತರ ಶತನಾಮಾವಳಿ ಪೂಜಾಂ ಸಮರ್ಪಯಾಮಿ ||

ಎಂದು ಪುಷ್ಪಾರ್ಚನೆಮಾಡಿ ನಮಸ್ಕರಿಸುವುದು

http://poojavidhana.blogspot.com/

**ನಮಸ್ಕಾರ** (ಹೂ ಅಕ್ಷತೆಯನ್ನು ಕೈಯಲ್ಲಿ ಹಿಡಿದು)

ಯಾರಕ್ತಾಂಬುಜವಾಸಿನೀ ವಿಲಸಿನೀ ಚಂಡಾಂಶು ತೇಜಸ್ವಿನೀ |
ಆರಕ್ತಾರುಧಿರಾಂಬರಾ ಹಸಖೀ ಯಾ ಶ್ರೀ ಮನೋಹ್ಲಾದಿನೀ ||
ಯಾ ರತ್ನಾಕರ ಮಂಥನಾತ್ ಪ್ರಘಟಿತಾ ವಿಷ್ಣೋಶ್ಚಯಾಗೇಹಿನೀ |
ಸಾಮಾಂ ಪಾತು ಮನೋರಮಾ ಭಗವತೀ ಲಕ್ಷ್ಮೀಶ್ಚ ಪದ್ಮಾ ಶುಭಾ |

(ಎಂದು ಪ್ರಾರ್ಥಿಸಿ ಸಾಷ್ಟಾಂಗ ನಮಸ್ಕಾರ ಮಾಡಬೇಕು)

**ಮಹಾಲಕ್ಷ್ಮೈಚ ವಿದ್ಮಹೇ ವಿಷ್ಣುಪತ್ನ್ಯೈ ಚ ಧೀಮಹಿ |**
**ತನ್ನೋ ಲಕ್ಷ್ಮೀಪ್ರಚೋದಯಾತ್ ||**

ಎಂದು ಪ್ರಾರ್ಥಿಸಿ ವೈಭವ ಲಕ್ಷ್ಮೀ ದೇವಿಯನ್ನು ಪೂಜಿಸಿದ ನಂತರ





ಅನಯಾ ಪೂಜಯಾ ಭಗವತೀ ವೈಭವ ಲಕ್ಷ್ಮೀ
ಪ್ರಿಯತಾಂ ಪ್ರೀತಾ ವರದಾ ಭವತು ||
|| ಶ್ರೀ ಲಕ್ಷ್ಮೀ ನಾರಾಯಣ ಪ್ರಸಾದ ಸಿದ್ಧಿರಸ್ತು ||

(ಅಕ್ಷತೆ, ನೀರನ್ನು ಅರ್ಘ್ಯ ಪಾತ್ರೆಗೆ ಬಿಟ್ಟು ದೇವಿಗೆ ಸಮರ್ಪಣೆ ಮಾಡಬೇಕು.)

### ಪುನಃ ಪೂಜಾ :

**ದೇವಿ ದೇಹಿ ಪರಂ ಜ್ಞಾನಂ ದೇವಿ ದೇಹಿ ಪರಂ ಸುಖಂ |**
**ಧನಂ ದೇಹಿ ಯಶೋ ದೇಹಿ ಕಾಮಂ ಮೋಕ್ಷಂಚ ದೇಹಿ ಮೇ ||**

ಎಂದು ಬೇಡಿಕೊಂಡು ಅಕ್ಷತೆ ಅರ್ಪಿಸಿ 5 ನಮಸ್ಕಾರಗಳನ್ನು ಹಾಕಿ ಪೂಜಾ ಸಮಾಪ್ತಿಯನ್ನು ಮಾಡಬೇಕು.

http://poojavidhana.blogspot.com/

### ಶ್ರೀ ಪ್ರಸನ್ನ ವೈಭವಲಕ್ಷ್ಮೀ ಮಹಿಮೆ

ಜಗನ್ಮಾತೆಯಾದ ಶ್ರೀದೇವಿಯ ಅನಂತ ಕಲ್ಯಾಣ ರೂಪಗಳಲ್ಲಿ ವೈಭವಲಕ್ಷ್ಮೀ ರೂಪವೂ ಒಂದು. ತನ್ನ ಎಡ ಬಲಗಳಲ್ಲಿ ಸಂಪತ್‌ದ್ಯೋತಕವಾದ ಗಜಗಳಿಂದ ದೇವಿ ಸೇವಿತಳಾಗಿದ್ದಾಳೆ. ಆಕೆಯು ಅರಳಿದ ತಾವರೆಯ ಮೇಲೆ ಸುಖಾಸೀನಳಾಗಿದ್ದಾಳೆ. ಚತುರ್ಭುಜಗಳಿಂದಶೋಭಿಸುವಮಾತೆಯುಮೇಲಿನ ಎರಡು ಹಸ್ತಗಳಲ್ಲಿ ಅರಳಿದ ತಾವರೆ ಹೂಗಳನ್ನು ಭಕ್ತಿ ಶ್ರದ್ಧೆಗಳ ಸಂಕೇತವಾಗಿ ಧರಿಸಿದ್ದಾಳೆ. ಕೆಳಭಾಗದ ಎರಡು ಹಸ್ತಗಳಿಂದ ಭಕ್ತರಿಗೆ ಬಲಹಸ್ತದಿಂದ ಅಪಾರ ಧನಸಂಪತ್ತನ್ನೂ ಎಡಹಸ್ತದಿಂದ ಅಭಯವನ್ನೂ ನೀಡಿ ಅನುಗ್ರಹಿಸುತ್ತಿದ್ದಾಳೆ.

ವೈಭವ ಲಕ್ಷ್ಮಿಯ ಮಹಿಮೆ ಅಪಾರವಾದದ್ದು. ಅನಾದಿಕಾಲದಿಂದಲೂ ಆಕೆಯನ್ನು ಭಕ್ತಿಯಿಂದ ಪೂಜಿಸಿದ ಹಲವಾರು ಭಕ್ತರು ಸಕಲ ಸೌಭಾಗ್ಯ ಸಂಪತ್ತುಗಳನ್ನು ಪಡೆದು, ಇಹ-ಪರ ಸುಖಗಳನ್ನು ಗಳಿಸಿ ಧನ್ಯರಾಗಿದ್ದಾರೆ.

ಅಷ್ಟಲಕ್ಷ್ಮೀ ಎಂದು 8 ರೂಪಗಳಿಂದ ಭಕ್ತರನ್ನು ಅಷ್ಟೈಶ್ವರ್ಯಗಳಿಂದ

ಹರಸುವ ಕರುಣಾಮಯಿಯಾದ ಈ ಜಗನ್ಮಾತೆಯನ್ನು ತಪ್ಪದೆ ಆರಾಧಿಸಬೇಕು. ಲಕ್ಷ್ಮಿಯ ಕೃಪೆಯಿಲ್ಲದೆ ನಾರಾಯಣನ ಕೃಪೆಯೂ ಇಲ್ಲ. ಮಕ್ಕಳು ಮೊದಲು ತಾಯಿಯನ್ನು ಮೊರೆಹೋಗುವಂತೆ ನಾವು ಆಕೆಯನ್ನು "ಓ ಜಗನ್ಮಾತೆ ! ಅನಾಥನೂ, ಸಕಲ ದಾರಿದ್ರ್ಯಗಳಿಂದಲೂ ಬಳಲುತ್ತಿರುವ ನನ್ನನ್ನು ಸರ್ವಥಾ ಸಲಹು. ನಿನ್ನ ಕೃಪೆಯಿಂದಲೇ ಜೀವನದಲ್ಲಿ 8 ಬಗೆಯ ಐಸಿರಿಯನ್ನು ಪಡೆಯಲು ಸಾಧ್ಯವಾಗಿದೆ. ನಿನ್ನ ಪರಮಾನುಗ್ರಹವಿದ್ದರೆ ತಿರುಕನೂ ಶ್ರೀಮಂತನಾಗಬಲ್ಲ" ಎಂದು ಭಕ್ತಿಯಿಂದ ಪ್ರಾರ್ಥಿಸೋಣ. http://poojavidhana.blogspot.com/

ಶ್ರೀ, ಪದ್ಮಾ, ಕಮಲಾ, ಮುಕುಂದ ಮಹಿಷೀ, ಲಕ್ಷ್ಮೀ, ತ್ರಿಲೋಕೇಶ್ವರೀ, ಮಾ, ಕ್ಷೀರಾಬ್ಧಿಸುತಾ, ವಿರಿಂಚ ಜನನೀ, ವಿದ್ಯಾ, ಸರೋಜಾಸನಾ, ಸರ್ವಾಭಿಷ್ಟ ಫಲಪ್ರದಾ ಎಂಬ ಹನ್ನೆರಡು ಪುಣ್ಯಕರ ಲಕ್ಷ್ಮೀ ನಾಮಗಳನ್ನು ಪ್ರಾತಃ ಕಾಲದಲ್ಲಿ ಯಾರು ಪಠಿಸುವರೋ ಅವರು ಎಲ್ಲಾ ಬಗೆಯ ಅಭೀಷ್ಟಗಳನ್ನೂ ಪಡೆಯುತ್ತಾರೆ.

ಆದಿ ಲಕ್ಷ್ಮೀ, ಸಂತಾನಲಕ್ಷ್ಮೀ, ಗಜಲಕ್ಷ್ಮೀ, ಧನಲಕ್ಷ್ಮೀ, ಧಾನ್ಯಲಕ್ಷ್ಮೀ, ವಿಜಯಲಕ್ಷ್ಮೀ, ಧೈರ್ಯಲಕ್ಷ್ಮೀ ಮಹಾಲಕ್ಷ್ಮೀ ಎಂಬ ಎಂಟು ರೂಪಗಳಿಂದ ನಂಬಿದ ಭಕ್ತರನ್ನು ಸಲಹುತ್ತಿರುವ ಮಹಾತಾಯೇ! ನಿನಗೆ ಅನಂತಾನಂತ ನಮಸ್ಕಾರಗಳು ಎಂದು ಬೇಡೋಣ. ಸರ್ವಸುಗಂಧರೂಪಿಣಿ ಲಕ್ಷ್ಮಿಯನ್ನು ಹಾಲು, ಮೊಸರು, ತುಳಸಿ, ಪರಿಮಳ ದ್ರವ್ಯಗಳಿಂದ ಧನ-ಧಾನ್ಯಗಳಲ್ಲಿ ಸದಾ ನೆಲೆಸಿರುವ ಮಹಾಲಕ್ಷ್ಮಿಯನ್ನು ಭಕ್ತಿಯಿಂದ ಕೃತಜ್ಞತೆಯಿಂದ ನಮಸ್ಕರಿಸಬೇಕು. ಆಹಾರದಲ್ಲಿ ಲಕ್ಷ್ಮಿಯು ಸದಾ ನೆಲೆಸಿರುತ್ತಾಳೆ. ಅದನ್ನು ಎಂದೆಂದಿಗೂ ನಾವು ತಿರಸ್ಕಾರದಿಂದ ಕಾಣಬಾರದು. ಕೋಪ, ಅಸಮಾಧಾನ, ದುಃಖದಿಂದ ಆಹಾರವನ್ನು ಸೇವಿಸಿದರೆ ಲಕ್ಷ್ಮಿಯು ನಮಗೆ ಒಲಿಯಲಾರಳು. ಆದ್ದರಿಂದ ಸದಾ ಹಸಮ್ಮುಖಿಗಳಾಗಿ ಕೋಪ ವರ್ಜಿತರಾಗಿ ಇರಬೇಕು. ಹೀಗಿರುವಾಗ ಮಾತೆ ವೈಭವಲಕ್ಷ್ಮಿಯು ತನ್ನ ಕೃಪಾ ಕಟಾಕ್ಷವನ್ನು ನಮ್ಮ ಮೇಲೆ ಬೀರುವುದು ನಿಶ್ಚಯವಾಗಿದೆ.

ನಾರದ, ಪರಾಶರ, ಭೃಗು, ಅಗಸ್ತ್ಯ ಮುಂತಾದ ಮಹಾ ಮಹಿಮರು ಆಕೆಯನ್ನು ಪೂಜಿಸಿ ಧನ್ಯರಾದರು. ಶ್ರೀ ದೇವಿಯು ತನ್ನನ್ನು ನಂಬಿದ ಭಕ್ತರನ್ನು





ಎಂದೆಂದಿಗೂ ಕೈ ಬಿಡುವುದಿಲ್ಲ. ಹೀಗಿರುವಾಗ ವೈಭವಲಕ್ಷ್ಮಿಯನ್ನು ತಪ್ಪದೆ ಪ್ರತಿ ಶುಕ್ರವಾರ ಸರಳವಾಗಿಯಾದರೂ ಪೂಜಿಸಿ ಧನ್ಯರಾಗೋಣ.

ವೈಭವ ಲಕ್ಷ್ಮೀ ಪೂಜೆಗೆ ಅನುಭವವೇ ಆಧಾರವಾಗಿದೆ. ಪೂಜಾಕಾಲದಲ್ಲಿ ಅಚಾತುರ್ಯದಿಂದ ನಿರ್ಮಾಲ್ಯದೊಡನೆ ಹೊರಗೆಸೆದ ಉಂಗುರ ಒಬ್ಬ ಮುತ್ತೈದೆಗೆ ದೊರಕಿತು. ರೈಲಿನಲ್ಲಿ ಕಳೆದುಹೋದ ಹಣದಚೀಲ ಮತ್ತೆ ದೊರಕಿತು. ಖಾಸಗೀ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ದುರ್ದೈವದಿಂದ ಕೆಲಸ ಕಳೆದುಕೊಂಡವರಿಗೆ ಮೇಲಧಿಕಾರಿಗಳ ಕಿರುಕುಳ ತಪ್ಪಿ ಮರಳಿ ಉದ್ಯೋಗ ದೊರಕಿತು. http://poojavidhana.blogspot.com/

ವೈಭವಲಕ್ಷ್ಮೀ ಪೂಜೆಯನ್ನು ಮಾಡಿದ ಪ್ರಭಾವದಿಂದ ದಾವಣಗೆರೆಯ ಒಬ್ಬರಿಗೆ ವೇತನದಲ್ಲಿ ಸುಮಾರು ನಾಲ್ಕುನೂರು ರೂಪಾಯಿ ಬಡ್ತಿ ದೊರೆಯಿತು. ಆರ್ಥಿಕ ತೊಂದರೆಯಿಂದ ಬೇಸತ್ತ ಮೈಸೂರಿನ ಅಂಚೆ ಇಲಾಖೆಯ ನೌಕರರೊಬ್ಬರಿಗೆ ಕೇವಲ 2 ಸಲ ಆತನ ಪತ್ನಿಯು ಪೂಜೆಯನ್ನು ಮಾಡಿದ ಪ್ರಭಾವದಿಂದ ಅಚಾನಕವಾಗಿ 2000 ರೂ. ಹಣ ದೊರೆತು ಮಗನಿಗೆ ನೌಕರಿ ದೊರೆಯಿತು.

ಅಪೆಂಡಿಸೈಟಿಸ್ ಕಾಯಿಲೆಯಿಂದ ನರಳುತ್ತಿದ್ದು ಸಾವನ್ನು ನಿರೀಕ್ಷಿಸಿದ್ದ ಮಂಗಳೂರಿನ ಒಬ್ಬಾತನ ಪತ್ನಿಯು ಆಚರಿಸಿದ ವೈಭವಲಕ್ಷ್ಮೀ ಪೂಜಾ ಪ್ರಭಾವದಿಂದ ಅವರು ಸುಲಭ ಶಸ್ತ್ರ ಚಿಕಿತ್ಸೆಯಿಂದಲೇ ಆರೋಗ್ಯವಂತರಾಗಿ ಬದುಕುಳಿದರು.

ಪತ್ರಿಕಾ ಕಛೇರಿಯಿಂದ ಅನ್ಯಾಯವಾಗಿ ವಜಾ ಮಾಡಲ್ಪಟ್ಟ ಹುಬ್ಬಳ್ಳಿಯ ಶ್ರೀ ಘಳಗಿ ಎಂಬುವವರ ಪತ್ನಿಯು ಸ್ನೇಹಿತೆಯರ ಸಲಹೆಯಂತೆ ವೈಭವಲಕ್ಷ್ಮಿಯನ್ನು ಪೂಜಿಸಿದರು. ಇದರಿಂದ ಬೇಗನೆ ಅವರಿಗೆ ಮತ್ತೆ ನೌಕರಿ ದೊರೆತು ಸುಖಿಗಳಾದರು. ಇನ್ನೋರ್ವ ಬೆಂಗಳೂರಿನ ಜಯನಗರದ ಭಕ್ತರ ಮಕ್ಕಳಿಗೆ ಈ ಪೂಜಾ ಪ್ರಭಾವದಿಂದ ಶೀಘ್ರ ವಿವಾಹ ನಿಶ್ಚಯವಾಗಿ ಆರ್ಥಿಕ ತೊಂದರೆಯು ಪರಿಹಾರವಾಯಿತು.



ಹೀಗೆ ಸಕಲ ಮನೋರಥಗಳನ್ನು ಪೂರೈಸುವ ಸಿರಿದೇವಿಯು ವೈಭವಲಕ್ಷ್ಮಿಯಾಗಿ ನಂಬಿ ಪೂಜಿಸುವ ಭಕ್ತರಿಗೆ ಕಾಮಧೇನು, ಕಲ್ಪವೃಕ್ಷದಂತೆ ಬೇಡಿದ ಫಲಗಳನ್ನು ನೀಡುತ್ತಿದ್ದಾಳೆ.

ಪದ್ಮಪುರಾಣೋಕ್ತಿಯಂತೆ ಯಾವ ಮನೆಯಲ್ಲಿ ಅತಿಥಿಗಳಿಗೆ ಯಥಾ ಶಕ್ತಿ ಸತ್ಕಾರ ನಡೆಯುವುದೋ, ಪಿತೃಕಾರ್ಯ, ದೇವತಾ ಪೂಜೆ ಸದಾ ಸತ್ಯವನ್ನೇ ಹೇಳುವುದು, ನುಡಿದಂತೆ ನಡೆಯುವುದು, ಗೋ ರಕ್ಷಣೆ, ಧಾನ್ಯ ಸಂಗ್ರಹ, ಕಲಹವಿಲ್ಲದ ಸ್ಥಳ, ಪತಿಯೊಡನೆ ಹೊಂದಿಕೊಂಡು ವೈಮನಸ್ಯವಿಲ್ಲದ ಸದಾ ಹಸನ್ಮುಖಿಯಾದ ಗೃಹಿಣಿ ಇರುತ್ತಾಳೆಯೋ ಅಲ್ಲಿ ಲಕ್ಷ್ಮಿ ಭದ್ರವಾಗಿ ನೆಲೆಸುತ್ತಾಳೆ. ಈ ಮಾತು ಸ್ವಯಂ ಲಕ್ಷ್ಮೀದೇವಿಯ ಪತಿಯಾದ ಶ್ರೀಮನ್ನಾರಾಯಣನೇ ಹೇಳಿದ್ದಾಗಿದೆ.

ಇಂತಹ ಮಹಿಮಾನ್ವಿತಳೂ ಪರಮ ಕರುಣಾ ಮೂರ್ತಿಯೂ ಆದ ಶ್ರೀ ಹರಿಯ ಪ್ರಿಯೆಯಾದ ವೈಭವಲಕ್ಷ್ಮೀ ಪೂಜೆಯಿಂದ ಭಕ್ತರೆಲ್ಲರೂ ಕೃತಾರ್ಥರಾಗಿ, ಸುಖ, ಸೌಭಾಗ್ಯ, ಮಾಂಗಲ್ಯ, ಸಂಪತ್ತುಗಳನ್ನು ಪಡೆದು ಧನ್ಯರಾಗುತ್ತಾರೆ ಎಂಬಲ್ಲಿಗೆ ವೈಭವಲಕ್ಷ್ಮಿಯ ಮಹಿಮೆಯು ಸಂಪೂರ್ಣವಾಯಿತು.

http://poojavidhana.blogspot.com/

## ಆರತಿ ಹಾಡು

ಆರತಿ ಬೆಳಗಿರೆ ವೈಭವಲಕ್ಷ್ಮೀಗೆ | ಮಂಗಳ ಮಹತಾಯಿ ಶ್ರೀದೇವಿಗೆ |
ಚಿನ್ನಾದ ಹರಿವಾಣದಲ್ಲಿ ಓಕುಳೀಇಟ್ಟು | ಆರತಿ ಬೆಳಗಿರೆ ಶ್ರೀಲಕ್ಷ್ಮೀಗೆ || ೧ ||
ಮಂದಿರದೊಳು ಧನಧಾನ್ಯ ದೈರಿಸಿಯಿರಲಿ |
ಮನೆಮಂದಿಗೆಲ್ಲಾ ಸುಖಸೌಭಾಗ್ಯ ಬರಲಿ |
ಮಂದರಧರ ಶ್ರೀ ಕೃಷ್ಣನ ರಮಣಿಯು | ಬಂದಿಲ್ಲಿ ಆರತಿ ಸ್ವೀಕರಿಸಲಿ || ೨ ||
ಜಯ ಜಯವೆನ್ನಿರಿ ಜಯಲಕ್ಷ್ಮೀಗೆ | ಜಯ ಜಯವೆನ್ನಿರಿ ವೈಭವಲಕ್ಷ್ಮೀಗೆ |
ಭಯವೆಲ್ಲಾ ದೂರವಾಗಿ ಜಯಸಿಗಲೆಮಗೆಂದು |
ಆರತಿ ಬೆಳಗಿರಿ ವೈಭವ ಲಕುಮಿಗೆ || ೩ ||





(ಕೈ ಜೋಡಿಸಿ)

**ದೇವಿ ದೇಹಿ ಪರಂ ಜ್ಞಾನಂ ದೇವಿ ದೇಹಿ ಪರಂ ಸುಖಂ |**
**ದೇವಿ ದೇಹಿ ಯಶೋ ದೇಹಿ ಮಾಂಗಲ್ಯಂ ದೇಹಿ ಮೇ ಶುಭೇ ||**

|| ವೈಭವಲಕ್ಷ್ಮೀ ದೇವ್ಯೈ ನಮಃ- ನೈವೇದ್ಯಂ ಸಮರ್ಪಯಾಮಿ ||
ಎಂದು ನೈವೇದ್ಯವನ್ನು ಅರ್ಪಿಸುವುದು

**ಪದ್ಮಾಸನೇ ಪದ್ಮಕರೇ ಸರ್ವಲೋಕೈಕ ಪೂಜಿತೇ |**
ನಾರಾಯಣ ಪ್ರಿಯೇ ದೇವಿ ಸುಪ್ರೀತಾಭವ ಸರ್ವದಾ ||

|| ಶ್ರೀ ಲಕ್ಷ್ಮೀನಾರಾಯಣ ಪ್ರಸಾದ ಸಿದ್ಧಿರಸ್ತು ||
ಎಂದು ನಮಸ್ಕರಿಸಿ
ಲಕ್ಷ್ಮೀ ಪ್ರಸಾದದ ಹೂವನ್ನು ತಲೆಯಲ್ಲಿ ಮುಡಿದು ಮುತ್ತೈದೆಯರಿಗೂ ನೀಡುವು ದು.

ಭದ್ರಂ-ಶುಭಂ-ಮಂಗಳಂ

http://poojavidhana.blogspot.com/

## ವೈಭವಲಕ್ಷ್ಮೀ ಪೂಜಾ ಆಚರಣೆ

ಈ ಪುಸ್ತಕದ ಒಂದು ಪ್ರತಿಯನ್ನು ಒಬ್ಬ ಮುತ್ತೈದೆಗೆ ದಾನ ಕೊಟ್ಟು ಆಶೀರ್ವಾದ ಪಡೆಯಿರಿ. ಅಷ್ಟಲಕ್ಷ್ಮೀ ರೂಪಿಯಾದ ಮಹಾಲಕ್ಷ್ಮಿಯ ಕೃಪಾಕಟಾಕ್ಷಸಿದ್ಧಿಗಾಗಿ ಎಂಟು ಜನ ಮುತ್ತೈದೆಯರಿಗೆ ದಾನ ನೀಡುವುದರಿಂದ ಲಕ್ಷ್ಮಿಯ ಪೂರ್ಣಾನುಗ್ರಹ ದೊರೆಯುತ್ತದೆ ಎಂಬುದು ಅನುಭವದ ಮಾತು.

**ದಾನ ಶ್ಲೋಕ :**

**ದೇವಿ ದೇಹಿ ಪರಂ ಜ್ಞಾನಂ ದೇವಿ ದೇಹಿ ಪರಂ ಸುಖಂ |**

**ಧನಂ ದೇಹಿ ಯಶೋ ದೇಹಿ ಕಾಮಂ ಮೋಕ್ಷಂಚ ದೇಹಿ ಮೇ ||**

ಎಂದು ಪ್ರಾರ್ಥಿಸಿ ಮುತ್ತೈದೆಯರಿಗೆ ಈ ಪುಸ್ತಕ ಹಾಗೂ ತಾಂಬೂಲ ನೀಡಿ ನಮಸ್ಕರಿಸಿ ಆಶೀರ್ವಾದ ಪಡೆದು ಸಂಪತ್ತು, ಅಭಿವೃದ್ಧಿಯನ್ನು ಪಡೆಯಿರಿ.

|| ಶ್ರೀ ವೈಭವಲಕ್ಷ್ಮೀ ಪ್ರಸಾದ ಸಿದ್ಧಿರಸ್ತು ||